Geetha Shishu Shikshana Sangha (R)
SIMHA SUBBAMAHALAKSHMI FIRST GRADE COLLEGE
KRS ROAD, MYSURU-570 016
ಯಶಸ್ YASHAS SSFGC Weekly Newsletter

Volume – 1 Issue No.–18 22th to 28th September 2019

# ಯುವ ಸಂಭ್ರಮ 2019ರಲ್ಲಿ SSFGC ಯ ಹೆಜ್ಜೆ ಗುರುತು

ದಿನಾಂಕ–22 ಸೆಪ್ಟೆಂಬರ್ 2019ರ ಭಾನುವಾರದಂದು ನಮ್ಮ ಕಾಲೇಜಿನ 28 ಜನ ವಿದ್ಯಾರ್ಥಿಗಳು 'ಮಹಿಳಾ ಸಬಲೀಕರಣ' ವಿಷಯವಾಗಿ 2019ನೇ ಸಾಲಿನ ಯುವ ಸಂಭ್ರಮ ನೃತ್ಯ ಪ್ರದರ್ಶನವನ್ನು ನೀಡಿದರು. "ಎಲೆ ಮರೆಯಲಿ ಕೆರಳಿದೆ ಗಾಯದ ಹೂವು" ಎನ್ನುವ ಶೀರ್ಷಿಕೆಯ ಗೀತೆಯಲಿ ಹೆಣ್ಣು ಶೋಷಣೆಗೆ ಒಳಪಡುತ್ತಿರುವ ನಾನಾ ಬಗೆಯ ಚಿತ್ರಣಗಳನ್ನು ಕಟ್ಟಿಕೊಡಲಾಯಿತು. ಗಂಡು–ಹೆಣ್ಣು ಎಂಬ ಭೇದ ಅವೈಜ್ಞಾನಿಕ ಎಂಬ ಅಂಶವನ್ನು ತಿಳಿಸುವುದರೊಂದಿಗೆ ವರದಕ್ಷಿಣೆ, ಅತ್ಯಾಚಾರ, ಅಸಮಾನತೆ ಮೊದಲಾದ ವಿಚಾರಗಳನ್ನ ಒಳಗೊಂಡಂತೆ, ನೃತ್ಯ ಪ್ರದರ್ಶನವನ್ನು ನೀಡಲಾಯಿತು.

ಮಹಿಳೆಯ ಭೌತಿಕ ರಚನೆಯ ಕಾರಣದಿಂದ ಅವಳನ್ನು ಅಬಲೆಯಾಗಿ ನಿರೂಪಿಸಿ, ಅವಳ ವ್ಯಕ್ತಿತ್ವದ ವಿಕಾಸವನ್ನು ನಿರಾಕರಿಸಲಾಗಿದೆ. ಸಮಾನತೆಗಾಗಿ ಹಾತೊರೆಯುವ ಹೆಣ್ಣಿನ ಕೂಗು ಇಂದು ನೆನ್ನೆಯದಲ್ಲ. ಪುರುಷ ಪ್ರಧಾನ ಸಮಾಜಕ್ಕೆ ಅದು ಅಪಸ್ವರದಂತೆ ಕೇಳುತ್ತಿದೆ. ತನ್ನ ಅಂತಃಸತ್ವದ ಮೂಲಕ ತನ್ನ ಅಸ್ಮಿತೆಯನ್ನು ಸಾಬೀತುಪಡಿಸುವ ಸವಾಲಿನ ಕಾಲ ಇದಾಗಿದೆ. ವ್ಯವಸ್ಥೆಯಲ್ಲಿ ತನಗೊಂದಿಷ್ಟು ಅವಕಾಶ ದೊರೆತರೆ ತನ್ನ ಸಾಮರ್ಥ್ಯವನ್ನು ಪ್ರಕಟಿಸಬಲ್ಲೆ ಎಂಬ ಮಹಿಳೆಯ ಆತ್ಮವಿಶ್ವಾಸ ಈ ರೂಪಕದಲ್ಲಿ ಅಡಕವಾಗಿತ್ತು.

ಇಂದು ಮಹಿಳೆ ಶಿಕ್ಷಿತಳಾಗಿ ಎಲ್ಲಾ ರಂಗದಲ್ಲಿಯೂ ಮುಂಚುಣಿಯಲ್ಲಿದ್ದಾಳೆ. ಆದರೂ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳು ಅವಳಿಗೆ ಎಲ್ಲೆ, ಕಟ್ಟುಗಳನ್ನು ರೂಪಿಸಿವೆ. ಒಂದಿಷ್ಟು ಬೆಂಬಲ, ಉತ್ತೇಜನ, ಅವಕಾಶ ದೊರೆತರೆ ಆಕೆ ತನ್ನ ಅಸ್ಮಿತೆಯನ್ನು ಕಂಡುಕೊಳ್ಳಬಲ್ಲಳು ಎಂಬುದು ಈ ನೃತ್ಯ ಪ್ರದರ್ಶನದ ವಸ್ತು ವಿಷಯವಾಗಿತ್ತು. ಹೆಣ್ಣಿನ ಅನನ್ಯತೆ ಅಂತಃ ಸಾಮರ್ಥ್ಯ ಅಸ್ಮಿತೆಗೆ ಈ ನೃತ್ಯ ರೂಪಕವಾಗಿ ಅಭಿವ್ಯಕ್ತಿ ಪಡೆದಿತ್ತು. ಅಂತಿಮವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮಹಿಳಾ ಸಾಧಕೀಯರ ಚಿತ್ರಪಟಗಳನ್ನು ಪ್ರದರ್ಶಿಸಲಾಯಿತು.

ನೃತ್ಯ ತರಬೇತಿಯ ಸಿದ್ಧತೆಗಾಗಿ ಕಾಲೇಜಿನ ವಿಶೇಷ ಸಮಿತಿಯನ್ನು ರಚಿಸಲಾಗಿತ್ತು. ಕನ್ನಡ ಸಹಾಯಕ ಪ್ರಾಧ್ಯಾಪಕಿಯಾದ ಅನಿತ.ಎಸ್. ರವರನ್ನು ಕಾಲೇಜಿನ ಯುವ ಸಂಭ್ರಮ ವೇದಿಕೆಯ ಸಂಯೋಜಕರನ್ನಾಗಿ ನೇಮಿಸಲಾಗಿತ್ತು. ಪ್ರಾಂಶುಪಾಲರು ಈ ಸಮಿತಿಯ ಅಧ್ಯಕ್ಷರಾಗಿದ್ದು, ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಯುತ ಅನಿಲ್.ಆರ್. ಹಾಗೂ ಗಣಕಯಂತ್ರ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶೃತಿ.ಡಿ. ರವರು ಈ ಸಮಿತಿಯ ಸಲಹಾ ಸದಸ್ಯರಾಗಿದ್ದರು. ವಿದ್ಯಾರ್ಥಿ ಸದಸ್ಯರನ್ನಾಗಿ ತೃತೀಯ ಬಿ.ಕಾಂ ವಿದ್ಯಾರ್ಥಿ ಲಿಖಿತ್‌ಬಾಬು.ಜೆ ಹಾಗೂ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ರಶ್ಮಿ.ಆರ್. ರವರನ್ನು ನೇಮಿಸಲಾಗಿತ್ತು.

ಹದಿಮೂರು ದಿನಗಳ ಕಾಲ ನಡೆದ ಈ ನೃತ್ಯ ತರಬೇತಿಯಲ್ಲಿ ಯಶಸ್, ಜಯರಾಜ್, ರಾಘವ್, ಅನಿಲ್, ವರದಾ ಎಂಬ ನೃತ್ಯ ಸಂಯೋಜಕರು ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವುದರ ಜೊತೆಗೆ ನೃತ್ಯವನ್ನು ಸಂಯೋಜಿಸಿದ್ದರು.

ಸೆಪ್ಟೆಂಬರ್ 22 ಭಾನುವಾರ ಸಂಜೆ ವರುಣನ ಆರ್ಭಟದ ನಡುವೆಯು ಬಯಲು ರಂಗಮಂದಿರದ ಅದ್ದೂರಿ ವರ್ಣರಂಜಿತ ವಿಶಾಲವಾದ ವೇದಿಕೆಯಲ್ಲಿ ನೃತ್ಯವನ್ನು ಪ್ರದರ್ಶಿಸಿ ನೆರೆದಿದ್ದ ಸಾವಿರಾರು ಯುವ ಮನಸ್ಸುಗಳಿಗೆ ಮನರಂಜನೆಯಂದಿಗೆ ಮಾಹಿತಿಯನ್ನು ನೀಡಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕರಾದ ಪ್ರೊ.ಕೆ.ವಿ.ಪ್ರಭಾಕರ ಪ್ರಾಂಶುಪಾಲರು, ಎಲ್ಲಾ ಉಪನ್ಯಾಸಕ ವರ್ಗದವರು,

ನೃತ್ಯ ಸಂಯೋಜಕರು, ವಿದ್ಯಾರ್ಥಿಗಳು ಪೋಷಕರು ಉಪಸ್ಥಿತರಿದ್ದರು. ಸಂಸ್ಥೆಯ ನಿರ್ದೇಶಕರಾದ ಪ್ರೋ.ಕೆ.ವಿ.ಪ್ರಭಾಕರ ಮತ್ತು ಪ್ರಾಂಶುಪಾಲರಾದ ಶ್ರೀಮತಿ ಪೂರ್ಣಿಮ.ಕೆ ರವರಿಗೆ ದಸರ ಯುವ ಸಂಭ್ರಮ ವೇದಿಕೆಯ ವಿಶೇಷ ಅಧಿಕಾರಿಗಳಿಂದ ಪ್ರಮಾಣಪತ್ರ ಪಾರಿತೋಷಕಗಳನ್ನು ನೀಡಿ ಗೌರವಿಸಲಾಯಿತು.

**ಅನಿತ.ಎಸ್**

ಕಾಲೇಜು ಕಾರ್ಯಕ್ರಮ ಸಂಯೋಜನಾಧಿಕಾರಿಗಳು

ಯುವ ಸಂಭ್ರಮ 2019

Students are practicing for Yuva Sambrama in Open air theater Manasagangothri













Student participated in yuva sambrama and live telecast in TV




Student's foot print was there in the wall these students are erasing those foot prints using Piece of chalk. These student name is Anu S Gowda I year B.Com and Rumana I year B.Com

# ಪೋಷಣ ಅಭಿಯಾನ ಜನಾಂದೋಲನ ಮತ್ತು 'ವಿದ್ಯಾಗ್ರಾಮ' ಏಕಲವ್ಯನಗರ ಉದ್ಘಾಟನಾ ಕಾರ್ಯಕ್ರಮ

ದಿನಾಂಕ : 22 ಸೆಪ್ಟಂಬರ್ 2019ರ ಶುಕ್ರವಾರದಂದು ನಮ್ಮ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಘಟಕ ಹಾಗೂ ನಾಗನಹಳ್ಳಿ ಗ್ರಾಮ ಪಂಚಾಯಿತಿಯ ಜಂಟಿ ಆಶ್ರಯದಲ್ಲಿ ಪೋಷಣ ಅಭಿಯಾನ ಜನಾಂದೋಲನ ಕಾರ್ಯಕ್ರಮ ಮತ್ತು ವಿದ್ಯಾಗ್ರಾಮ' ಉದ್ಘಾಟನಾ ಕಾರ್ಯಕ್ರಮವನ್ನು ನಾಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಏಕಲವ್ಯನಗರದಲ್ಲಿ ಮಧ್ಯಾಹ್ನ 2ರಿಂದ5 ಗಂಟೆಯವರೆಗೆ ಆಯೋಜಿಸಲಾಗಿತ್ತು.

ಭಾರತದಾದ್ಯಂತ ಜಾರಿಯಲ್ಲಿರುವ ಪೋಷನ್ ಅಭಿಯಾನ್ ಜನ ಆಂದೋಲನ ಕಾರ್ಯಕ್ರಮವು ಮಾನ್ಯ ಪ್ರಧಾನ ಮಂತ್ರಿಗಳು ಜಾರಿಗೆ ತಂದಿರುವ ಮಹತ್ವದ ಯೋಜನೆಗಳಲ್ಲಿ ಒಂದಾಗಿದೆ. ಇದರ ಅನ್ವಯ ಪೌಷ್ಠಿಕಾಂಶ, ರಕ್ತಹೀನತೆ, ನೈರ್ಮಲ್ಯತೆ ಬಗ್ಗೆ ಕಾರ್ಯಕ್ರಮಗಳನ್ನು ಆಯೋಜಿಸಲು ಕೇಂದ್ರ ಸರ್ಕಾರ ನಿರ್ದೇಶನವನ್ನು ನೀಡಿತ್ತು. ಈ ಕಾರ್ಯಕ್ರಮದ ಮೂಲ ಉದ್ದೇಶ ಮಕ್ಕಳು ಮತ್ತು ಯುವಕ, ಯುವತಿಯರಲ್ಲಿ ಪೋಷಣೆಯ ಬಗ್ಗೆ ಹೆಚ್ಚಿನ ಅರಿವು ಮತ್ತು ಜಾಗೃತಿಯನ್ನು ಮೂಡಿಸುವುದಾಗಿದೆ. ಇದಕ್ಕಾಗಿ ಅಗತ್ಯವಿರುವ ಸಮುದಾಯಕ್ಕೆ ಪೋಷಣೆ ಬಗ್ಗೆ ಪ್ರಚಾರ ಮಾಡಿ, ಕಾರ್ಯಕ್ರಮವನ್ನು ಆಯೋಜಿಸಬೇಕಾಗಿ ಮೈಸರು ವಿಶ್ವವಿದ್ಯಾನಿಲಯ ರಾಷ್ಟ್ರೀಯಸೇವಾ ಯೋಜನೆ ಘಟಕದ ಕಾರ್ಯಕ್ರಮ ಸಂಯೋಜನಾಧಿಕಾರಿಗಳಿಂದ ಬಂದ ಆದೇಶದ ಅನ್ವಯ ನಮ್ಮ ಕಾಲೇಜಿನ ಆಡಳಿತ ವರ್ಗದ ಮುಖ್ಯಸ್ಥರು ಹೊಸ ಗ್ರಾಮದ ಹುಡುಕಾಟದ ಅನ್ವೇಷಣೆಯಲ್ಲಿದ್ದಾಗ ನಮಗೆ ಅರಿವಿಗೆ ಬಂದಿದ್ದು ಕಾಲೇಜಿಗೆ ಸಮೀಪದಲ್ಲಿರುವ ನಾಗನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಐದು ಅಧೀನ ಗ್ರಾಮಗಳು.

**ನಾಗನಹಳ್ಳಿ ಗ್ರಾಮ ಪಂಚಾಯಿತಿ.**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಂತೆ ನಾಗನಹಳ್ಳಿ ಗ್ರಾಮ ಪಂಚಾಯಿತಿಯು 1994 ರಲ್ಲಿ ಆರಂಭವಾಗಿ ಇಂದಿಗೆ 25 ವರ್ಷಗಳನ್ನು ಪೂರೈಸಿದೆ. ನಾಗನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ನಾಗನಹಳ್ಳಿ ಲಕ್ಷ್ಮಿಪುರ, ಕಳಸ್ತವಾಡಿ, ಶ್ಯಾದನಹಳ್ಳಿ ಹಾಗೂ ಏಕಲವ್ಯನಗರ ಗ್ರಾಮಗಳು ಒಳಪಡುತ್ತವೆ.



(ನಾಗನಹಳ್ಳಿಗ್ರಾಮ ಪಂಚಾಯಿತಿ ಕಾರ್ಯಾಲಯ)

**ಏಕಲವ್ಯ ನಗರ – ಇಂದಿರಾಗಾಂಧಿ ಬಡಾವಣೆ**

ಪ್ರಸ್ತುತ ಇಂದಿರಾಗಾಂಧಿ ಬಡಾವಣೆಯಲ್ಲಿ ಎಂದು ತಲೆಯೆತ್ತಿರುವ ಬೃಹತ್ ವಸತಿ ಸಂಕೀರ್ಣದ ಜಾಗದಲ್ಲಿ 17 ವರ್ಷಗಳಿಂದ ಹಿಂದೆ 2003ರಲ್ಲಿ ಸಾಮಾಜಿಕವಾಗಿ ಹಿಂದುಳಿದ ಸಿಳ್ಳೆಕ್ಯಾತ, ದೊಂಬಿದಾಸ, ಹಕ್ಕಿಪಿಕ್ಕಿ, ಕೋಲೆಬಸವ ಜನಾಂಗದವರು ಗುಡಿಸಲು, ಶೆಡ್‌ಗಳ ನಿರ್ಮಾಣ ಮಾಡಿಕೊಂಡು ವಾಸಿಸುತ್ತಿದ್ದು. 2009ರಲ್ಲಿ ಕೊಳಚೆಗೇರಿ ನಿರ್ಮೂಲನಾ ಮಂಡಳಿ ಈ ಜನರನ್ನು ಆ ಸ್ಥಳದಿಂದ ಏಕಲವ್ಯನಗರ ಎನ್ನುವ ಪ್ರದೇಶಕ್ಕೆ ತಾತ್ಕಾಲಿಕವಾಗಿ ಶೆಡ್‌ಗಳ ಮುಖಾಂತರ ಸ್ಥಳಾಂತರಿಸಿ ಅಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿಯವರು 1040 ಮನೆಗಳ ವಸತಿ ಸಂಕೀರ್ಣದ ಜೊತೆಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಭವನ, ಸಾರ್ವಜನಿಕ ಗ್ರಂಥಾಲಯ, ಅಂಗನವಾಡಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೀಗೆ ಅಗತ್ಯಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾಗಿ ನಿರ್ಮಾಣಮಾಡಿ, ಸ್ಥಳಾಂತರಿಸಿದ್ದ ಜನರಿಗಾಗಿ ಸಿದ್ಧಪಡಿಸಿದರು. 2009ರಿಂದ 2017ರವರೆಗೆ ಸುಮಾರು 8 ವರ್ಷಗಳ ಕಾಲ ನಿರ್ಮಾಣಕಾರ್ಯ ಮುಂದುವರೆದು 2017ರಲ್ಲಿ ಉದ್ಘಾಟನೆಗೆ ಸಿದ್ದವಾಗಿತ್ತು. ಅಂದಿನ ಮಾನ್ಯ ಮುಖ್ಯಮಂತ್ರಿಗಳಿಂದ ಶ್ರೀಯುತ ಸಿದ್ದರಾಮಯ್ಯ ಅವರು ದಿನಾಂಕ : 15–07–2019ರಲ್ಲಿ ಸಾವಿರಾರು ಜನರ ಸಮೂಹದೊಡನೆ ಉದ್ಘಾಟಿಸಿದರು.

ಅಂದಿನಿಂದ ಅಲ್ಲಿನ ಜನರು ಎಲ್ಲಾ ವ್ಯವಸ್ಥೆಗಳಿದ್ದರು. ಅದನ್ನು ಸರಿಯಾಗಿ ಬಳಸಿಕೊಳ್ಳದೆ ಅಲ್ಲಿ ಅನ್ಯೆರ್ಮಲ್ಯತೆ, ತಾಂಡವಾಡುತ್ತಿದ್ದು ಕೊಳಚೆ ಪ್ರದೇಶವಾಗಿ ಮಾರ್ಪಾಟಾಗಿದೆ. ಜನರಲ್ಲಿ ಸಾಕಷ್ಟು ಅರಿವಿಲ್ಲದಿರುವುದು ಇದಕ್ಕೆ

ಕಾರಣವಾಗಿದೆ. ಈ ಕಾರಣಕ್ಕಾಗಿ ಪೋಷಣ ಅಭಿಯಾನ ಜನಾಂದೋಲನ ಕಾರ್ಯಕ್ರಮವನ್ನು ಇಲ್ಲಿ ಆಯೋಜಿಸಲು ನಿರ್ಧರಿಸಲಾಯಿತು. ಅಲ್ಲದೆ 'ಏಕಲವ್ಯನಗರ' ಗ್ರಾಮವನ್ನು ವಿದ್ಯಾಗ್ರಾಮವನ್ನಾಗಿ ಆಯ್ಕೆಮಾಡಿ ಕೊಳ್ಳಲಾಯಿತು.

ವಿದ್ಯಾಗ್ರಾಮ ಯೋಜನೆಯು ನಮ್ಮ ವಿದ್ಯೆಯನ್ನು ಗ್ರಾಮಕ್ಕೆ ತಲುಪಿಸುವ ಹಾಗೂ ಗ್ರಾಮ ಮತ್ತು ವಿದ್ಯೆಯನ್ನು ಒಂದುಗೂಡಿಸುವ ಮಹತ್ವದ ಘಟಕವಾಗಿ ಉದ್ಘಾಟನೆಗೊಂಡಿತು.

ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಅಧ್ಯಾಪಕರುಗಳು ಗ್ರಾಮದಲ್ಲಿ ನೈರ್ಮಲ್ಯತೆಯ ಬಗ್ಗೆ ಅರಿವನ್ನು ಮೂಡಿಸುವ ಸಲುವಾಗಿ ಕಾಲೇಜಿನಿಂದ ಗ್ರಾಮದವರೆಗೆ ಹಸಿರು ನಿಶಾನೆಯ ಆರಂಭದೊಂದಿಗೆ ಕಾಲ್ನಾಡಿಗೆಯಲ್ಲಿ ಮೆರವಣಿಗೆ ಹೊರಟು ಗ್ರಾಮದ ಎಲ್ಲಾ ರಸ್ತೆಗಳಲ್ಲಿ ಸಂಚರಿಸಿ, ಘೋಷಣೆಗಳನ್ನು ಕೂಗುತ್ತ ಫಲಕಗಳನ್ನು ಪ್ರದರ್ಶಿಸಿ, ಜನರಲ್ಲಿ ಸ್ವಚ್ಛತೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ನಂತರ ವೇದಿಕೆಯ ಕಾರ್ಯಕ್ರಮವನ್ನು ಏಕಲವ್ಯ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿತ್ತು.

ಗೀತಾ ಶಿಶು ಶಿಕ್ಷಣ ಸಂಘದ ಗೌರವಾನ್ವಿತ ಸಂಸ್ಥಾಪಕ ಮುಖ್ಯಸ್ಥರಾದ ಬಿ.ಎಸ್.ಪಂಡಿತ್ ಅವರನ್ನು ಸ್ಮರಿಸುತ್ತಾ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಮಮತ ಮತ್ತು ತಂಡದ ವಿದ್ಯಾರ್ಥಿನಿಯರು ರಾಷ್ಟ್ರೀಯ ಸೇವಾ ಯೋಜನೆಯ ಗೀತೆಯನ್ನು ಹಾಡಿದರು. ಸಂಸ್ಥೆಯ ಗೌರವಾನ್ವಿತ ಕಾರ್ಯದರ್ಶಿಗಳಾದ ವನಜಾ.ಬಿ.ಪಂಡಿತ್, ನಾಗನಹಳ್ಳಿ ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಕಾಲೇಜಿನ ನಿರ್ದೇಶಕರಾದ ಪ್ರೊ.ಕೆ.ವಿ.ಪ್ರಭಾಕರ, ಪ್ರೊ..ಚಂದ್ರಶೇಖರ, ಪ್ರಾಂಶುಪಾಲರು, ಮೊದಲಾದ ಅತಿಥಿಗಣ್ಯರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮೈಸೂರಿನ ಜೀವಿತ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷರಾದ ಪ್ರೊ.ಚಂದ್ರಶೇಖರ ಅವರು **"ಸ್ವಾಸ್ಥ ಮತ್ತು ಸಮತೋಲನ ಜೀವನ"** ಎಂಬ ವಿಷಯವಾಗಿ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಗ್ರಾಮವು ವಿದ್ಯಾಗ್ರಾಮದ ಜೊತೆಗೆ ಸ್ವಾಸ್ತ್ಯಗ್ರಾಮವು ಆಗಬೇಕಿದೆ. ಎನ್ನುವ ಆರಂಭಿಕ ನುಡಿಗಳೊಂದಿಗೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಅತಿ ಮುಖ್ಯ ಎನ್ನುತ್ತಾ ಸ್ವಾಸ್ಥ್ಯ ಮತ್ತು ಸಮತೋಲನ ಜೀವನದ ಮಹತ್ವ ಮತ್ತು ಅದಕ್ಕೆ ಅಗತ್ಯವಾದ ಮಾರ್ಗದರ್ಶನವನ್ನು ವೈಜ್ಞಾನಿಕ ಅಂಶಗಳೊಂದಿಗೆ ನಿರೂಪಿಸಿದರು.

ನಾಗನಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳಾದ ಕಲಾವತಿ ಹೆಚ್.ಆರ್. ಅವರು ಮಾತನಾಡುತ್ತಾ ಕಾಲೇಜಿನ ಈ ಹೊಸ ಅಭಿವೃದ್ಧಿಯ ಕಾರ್ಯಕ್ಕೆ ಅಭಿನಂದಿಸಿ ಕಾರ್ಯಕ್ರಮವು ಯಶಸ್ವಿಯಾಗಲೆಂದು ಹಾರೈಸಿ ಗ್ರಾಮಪಂಚಾಯಿತಿಯ ಸಹಕಾರ ಸದಾ ಇರುತ್ತದೆ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಏಕಲವ್ಯನಗರದ ಸದಸ್ಯರಾದ ರೇವಣ್ಣ ಅವರು ಮಾತನಾಡಿ ವಿದ್ಯಾಗ್ರಾಮವನ್ನಾಗಿ ಏಕಲವ್ಯನಗರವನ್ನು ಆಯ್ಕೆಮಾಡಿಕೊಂಡಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಊರಿನ ಸಹಕಾರ ಕಾಲೇಜಿಗೆ ಸದಾ ಇರುತ್ತದೆ ಎಂದು ತಿಳಿಸಿದರು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿ ನಾಯಕರಾದ ದರ್ಶನ್ ತಮ್ಮ ರಾಷ್ಟ್ರೀಯ ಸೇವಾ ಯೋಜನೆಯ ಅನುಭವವನ್ನು ಹಂಚಿಕೊಂಡರು.

ನಂತರ ಕಾಲೇಜಿನ ಮಾಸಪತ್ರಿಕೆಯಾದ **"ಯಶಸ್ಸನ್ನು"** ಎಲ್ಲಾ ಮುಖ್ಯ ಅತಿಥಿಗಳು ಬಿಡುಗಡೆಮಾಡಿದರು.

ಸಂಸ್ಥೆಯ ಗೌರವಾನ್ವಿತ ಕಾರ್ಯದರ್ಶಿಗಳಾದ **ವನಜಾ.ಬಿ.ಪಂಡಿತ್** ಅವರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಕಾಲೇಜು ಮತ್ತು ಗ್ರಾಮಪಂಚಾಯಿತಿಯ ಹೊಸ ಪ್ರಯತ್ನ ಯಶಸ್ವಿಯಾಗಲೆಂದು ಹಾರೈಸಿದರು.

ಕಾಲೇಜಿನ ನಿರ್ದೇಶಕರಾದ ಪ್ರೊ.ಕೆ.ವಿ.ಪ್ರಭಾರದ ಅವರು ಸಮಾರೋಪ ನುಡಿಗಳನ್ನಾಡುತ್ತಾ ರಾಷ್ಟ್ರೀಯ ಸೇವಾ ಯೋಜನೆಯ ಇತಿಹಾಸ, ವಿದ್ಯಾಗ್ರಾಮ ಯೋಜನೆಯ ಪರಿಕಲ್ಪನೆಯ ಬಗ್ಗೆ ತಿಳಿಸುತ್ತಾ ಗ್ರಾಮ ಪಂಚಾಯಿತಿಯ ಎಲ್ಲಾ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯ ಕಾಲೇಜು ಕಾರ್ಯಕ್ರಮಾಧಿಕಾರಿ ಗಳಾದ **ಪ್ರಿಯಾಂಕ ಎಂ.ಎನ್**. ಅವರು ನೆರೆದಿದ್ದ ಎಲ್ಲರನ್ನು ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಉಪನ್ಯಾಸ ವರ್ಗದವರು, ವಿದ್ಯಾರ್ಥಿಗಳು, ಗ್ರಾಮಸ್ಥರು, ಅಂಗನವಾಡಿ ಕಾರ್ಯಕರ್ತರು, ಅಶಾಕಾರ್ಯಕರ್ತರು, ಏಕಲವ್ಯನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಯರಾದ ಮಹದೇವ ಅವರು ಗ್ರಾಮ ಪಂಚಾಯಿತಿ ಸದಸ್ಯರಾದ ಪಾಪಮ್ಮ, ರೇವಣ್ಣ, ಮೊದಲಾದವರು ಉಪಸ್ಥಿತರಿದ್ದರು, 'ವಿದ್ಯಾಗ್ರಾಮ' ಯೋಜನೆಯ ಸಂಯೋಜಕರಾದ ಅನಿತ.ಎಸ್ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು.


**ಅನಿತ.ಎಸ್**

**ಸಂಯೋಜಕರು, ವಿದ್ಯಾಗ್ರಾಮ ಯೋಜನೆ.**


### Subject Expert visits to BCA Department

On 21st September 2019, Mrs Savitha K V, Ass Professor in Hindustan First Grade College, Mysuru visited our campus. Savitha interacted with students asking question about the subjects. She gave some guidelines about how to prepare for lab exam, how examiner will ask the questions and some of the points to remember. Mrs Savitha is the Advisory Member of the BCA Department.

Mrs Savitha interacting with students and explaining some of the topics.

### Industrial visit to JK Tyre






On 24th September 2019, Ms Priyanka M N and Mr Subramanya visited the JK Tyre industry. They met HR of the JK tyre. Industrial visit for the student for this they met HR of the JK tyre.

## NSS Activity

On 21st September 2019, NSS volunteers were engaging singing exercise. They were divided into groups and practicing the songs.




**Students are discussion with the students**







**Students are singing a song**

## The meaning of Swaraj – M.K.Gandhi

***It has been said that Indian Swaraj will be the rule of the majority community, i.e, the Hindus. There could not be a greater mistake than that. If it were to be true, I for one would refuse to call it Swaraj and would fight it with all the strength at my command, for to me Hind Swaraj is the rule of all people, is the rule of justice.***

***Young India, 16-4-'31***

**ಸಂಪಾದಕರು**

ಶ್ರೀಮತಿ ಶೃತಿ.ಡಿ, ಮುಖ್ಯಸ್ಥರು, ಗಣಕಯಂತ್ರ **ವಿಜ್ಞಾನ** ವಿಭಾಗ

**ಛಾಯಾಚಿತ್ರ ಕೃಪೆ**

ಡಾ. ಪ್ರಭಾಕರ ಕೆ. ವಿ. ನಿರ್ದೇಶಕರು

ಶ್ರೀಮತಿ ಪುರ್ಣಿಮ ಪ್ರಭಾರ ಪ್ರಾಂಶುಪಾಲರು

ಶ್ರೀ ಅನಿಲ್. ಎಂ, ಸಹಾಯಕ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ

ಶ್ರೀ ಸುಬ್ರಮಣ್ಯ ಕೆ.ಆರ್, ಸಹಾಯಕ ಪ್ರಾಧ್ಯಾಪಕರು, ಮ್ಯಾನೇಜೆಮೆಂಟ್ ವಿಭಾಗ

## Photo Corner

